## ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 612(643) |
| 2 | ಸದಸ್ಯರ ಹೆಸರು | ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ವಿಷಯ | ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವ ಬಗ್ಗೆ |
| 4 | ಉತ್ತರಿಸಬೇಕಾದ ದಿನಾಂಕ | 11.03.2020 |
| 5 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನಲ್ಲಿ ಒಟ್ಟು ಎಷ್ಟು ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದೆ; | ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನಲ್ಲಿ ಒಟ್ಟು 7 ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. |
| ಆ) | ಒಟ್ಟು ಎಷ್ಟು ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಣೆ ಮಾಡಲಾಗಿದೆ; | 1) ಶಿವಪುರ 2) ರಾಮಾಪುರ ಎಂಬ 02 ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಣೆ ಮಾಡಲಾಗಿದೆ. |
| ಇ) | ಘೋಷಣೆಯಾದ ಕಂದಾಯ ಗ್ರಾಮಗಳನ್ನು ಭೂಮಿ ಉಸ್ತುವಾರಿ ಕೋಶಗಳಲ್ಲಿ ಅಳವಡಿಸಲಾಗಿದೆಯೇ; | ಕರ್ನಾಟಕ ರಾಜ್ಯಪತ್ರದಲ್ಲಿ ಅಂತಿಮ ಅಧಿಸೂಚನೆಗೊಂಡು ಘೋಷಣೆಯಾಗಿರುವ ಶಿವಪುರ ಮತ್ತು ರಾಮಾಪುರ ಗ್ರಾಮಗಳ ಹೆಸರನ್ನು ಭೂಮಿ ತಂತ್ರಾಂಶದ ವಿಲೇಜ್ ಮಾಸ್ಟರ್‌ನಲ್ಲಿ ಸೇರಿಸಲಾಗಿದೆ. ಸಂಬಂಧಪಟ್ಟ ತಹಶೀಲ್ದಾರರು ಆಕಾರಬಂದ್ ಮತ್ತು ಇತರೆ ಸರ್ವೆ ದಾಖಲೆಗಳೊಂದಿಗೆ ಪಹಣಿ ವರ್ಗಾವಣೆ ಕುರಿತು ಭೂಮಿ ಉಸ್ತುವಾರಿ ಕೋಶಕ್ಕೆ ಆನ್‌ಲೈನ್ ಮುಖಾಂತರ ಕೋರಿಕೆ ಸಲ್ಲಿಸಿದಲ್ಲಿ ಪಹಣಿ ವರ್ಗಾವಣೆ ಸೌಲಭ್ಯವನ್ನು ತಂತ್ರಾಂಶದಲ್ಲಿ ಒದಗಿಸಲಾಗುವುದು. |
| ಈ) | ಅಳವಡಿಸದೇ ಇದ್ದಲ್ಲಿ, ಭೂಮಿ ಉಸ್ತುವಾರಿ ಕೋಶಗಳಲ್ಲಿ ಅಳವಡಿಸಲು ಸರ್ಕಾರಕ್ಕೆ ಬೇಕಾಗುವ ಕಾಲಾವಕಾಶವೆಷ್ಟು; | ಈಗಾಗಲೇ ಮೇಲ್ಕಾಣಿಸಿದ ಗ್ರಾಮಗಳನ್ನು ಭೂಮಿ ತಂತ್ರಾಂಶದಲ್ಲಿ ಇಂಡೀಕರಿಸಲಾಗಿರುವ ಕಾರಣ ಸದರಿ ಪ್ರಶ್ನೆ ಉದ್ಭವಿಸುವುದಿಲ್ಲ. |

**ಕಂಇ 03 ಪಿಎಲ್‌ಸಿ 2020**

(ಆರ್. ಅಶೋಕ್)
ಕಂದಾಯ ಸಚಿವರು